ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.715/2021 CW- 26 PW-6

| | | |
|---|---|---|
| ಹೆಸರು | : | ಚಂದ್ರಶೇಖರ |
| ತಂದೆಯ/ಗಂಡನ ಹೆಸರು | : | ಗೋವಿಂದಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಡಿಎಸ್‌ಪಿ ಗುಪ್ತ ವಾರ್ತೆ |
| ವಾಸಸ್ಥಳ | : | ಕಲಬುರ್ಗಿ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 07-10-2023

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ಅಕ್ಟೋಬರ್ 2020 ರಿಂದ ಮಾರ್ಚ್ 2021 ರವರೆಗೆ ಸಿಂಧನೂರು ವೃತ್ತ ನಿರೀಕ್ಷಕನೆಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 08-10-2020 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-25 ರವರಿಂದ ಪಡೆದುಕೊಂಡೆ. ಅದೇದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-13 ಮತ್ತು 14 ರವರ ಸಮಕ್ಷಮ ಚಾಸಾ-1 ರವರು ತೋರಿಸಿದಂತೆ ಘಟನಾ ಸ್ಥಳದಲ್ಲಿ ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ನಿಪಿ-2 ರಂತೆ ಪಂಚನಾಮೆ ಜರುಗಿಸಿ ಪಂಚರ ಸಹಿ ಪಡೆದು ನನ್ನ ಸಹಿ ಹಾಕಿರುತ್ತೇನೆ. ಸಾಕ್ಷಿಯು ನಿಪಿ-2 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು. ಅದೇ ಸಂದರ್ಭದಲ್ಲಿ ಘಟನಾ ಸ್ಥಳದ ಕಚ್ಚಾ ನಕ್ಷೆ ಮತ್ತು ಪೋಟೋ ತೆಗೆದೆ. ಸಾಕ್ಷಿಯು ನಿಪಿ-3 ಮತ್ತು 4 ನ್ನು ನೋಡಿ ಗುರುತಿಸಿದೆ. ಅದೇದಿನ ಸಾಕ್ಷಿದಾರರಾದ ಚಾಸಾ-1 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡೆ.

ದಿಃ 15-10-2020 ರಂದು ಚಾಸಾ-24 ರವರು ಮಾನವಿಗೆ ಹೋಗಿ ಚಾಸಾ-1 ರವರು ತೋರಿಸಿದಂತೆ ನಿಪಿ-5 ರಂತೆ ಪಂಚನಾಮೆ ಜರುಗಿಸಿ, ನಿಪಿ-6 ರಿಂದ 9 ರಂತೆ ಪೋಟೋ ತೆಗೆದುಕೊಂಡು, ಚಾಸಾ-12 ರವರ ಹೇಳಿಕೆಗಳನ್ನು ತಂದು ಹಾಜರಪಡಿಸಿದ್ದರು, ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

ದಿಃ 08-10-2020 ರಂದು ಚಾಸಾ -1 ರವರ ಮದುವೆ ಆಹ್ವಾನ ಪತ್ರಿಕೆ ಮತ್ತು ಮದುವೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ಹಾಜರಪಡಿಸಿದರು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ನಿಪಿ-10 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-10ಎ ಎಂದು ಗುರುತಿಸಲಾಯಿತು.

ದಿಃ 23-10-2020 ರಂದು ಚಾಸಾ-1 ರವರ ಹೇಳಿಕೆಯನ್ನು ನ್ಯಾಯಾಧೀಶರ ಮುಂದೆ ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ಅದೇದಿನ ಚಾಸಾ-1 ರವರ ಮರುಹೇಳಿಕೆ ಪಡೆದುಕೊಂಡಿದ್ದೇನೆ.

ದಿಃ 27-10-2020 ರಂದು ಚಾಸಾ-1 ರವರ ಮನೆ ಉತಾರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ಅದನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13ಎ ಎಂದು ಗುರುತಿಸಲಾಯಿತು.

ದಿಃ 02-11-2020 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದರಿಂದ, ದಸ್ತಗೀರ ನಿಯಮ ಪಾಲಿಸಿ, ಬಿಡುಗಡೆ ಮಾಡಿದ್ದೇನೆ.

ದಿಃ 27-11-2020 ರಂದು ಇನ್ನೊಂದು ಘಟನಾ ಸ್ಥಳದ ಮಾನವಿ ಪುರಸಭೆ ಮುಖ್ಯಾಧಿಕಾರಿಗಳಿಂದ ದಾಖಲೆ ಪಡೆದುಕೊಂಡೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14 ಎ ಎಂದು ಗುರುತಿಸಲಾಯಿತು.

ದಿಃ 16-12-2020 ರಂದು ಘಟನೆ ದಿನದಂದು ಚಾಸಾ-1 ರವರ ಮನೆಯಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಸಹಾಯಕ ಅಭಿಯಂತರರು ವಿದ್ಯುತ್ ಸರಬರಾಜು ನಿಯಮಿತ, ಸಿಂಧನೂರು ರವರ ಕಡೆಯಿಂದ ವರದಿ ಪಡೆದುಕೊಂಡೆ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು, ಸಾಕ್ಷಿ ಸಹಿಯನ್ನು ನಿಪಿ-15 ಎ ಎಂದು ಗುರುತಿಸಲಾಯಿತು.

ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ಕಂಡುಬಂದಿದ್ದರಿಂದ ಆರೋಪಿತರ ವಿರುದ್ಧ ದೋ.ಪ. ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಘಟನಾ ಸ್ಥಳವು ಸಿಂಧನೂರು ನಗರ ಪೋ.ಠಾಣೆಯಿಂದ 500 ಮೀ ಅಂತರದಲ್ಲಿ ಇದೆ ಎಂದರೆ ಸರಿ. ನಡೆದುಕೊಂಡು ಬಂದರೆ 10 ನಿಮಿಷದಲ್ಲಿ ಬರಬಹುದು ಎಂದರೆ ಸರಿ. ಚಾಸಾ-1 ರಿಂದ 6, 8 ರಿಂದ 11 ರವರು ಒಂದೇ ಕುಟುಂಬದವರು ಎಂದರೆ, ಸಂಬಂಧಿಕರು. ಚಾಸಾ-7 ರವರು ಚಾಸಾ-5 ರವರ ಗೆಳೆಯ ಎಂದರೆ ಸರಿ. ಚಾಸಾ-2 ನಿವೃತ್ತ ನೌಕರ ಎಂದರೆ ಸರಿ. ಆರೋಪಿತರು ಮಾನವಿ ಬಸ್ ನಿಲ್ದಾಣದಲ್ಲಿ ಹೂವಿನ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಅವರು ಸ್ಥಿತಿವಂತರು ಎಂದರೆ ನನಗೆ ಗೊತ್ತಿಲ್ಲ.

ನಿಪಿ-2 ರೊಂದಿಗೆ ಇರುವ ಕಚ್ಚಾ ನಕ್ಷೆಯಲ್ಲಿ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ ಅಲ್ಲ. ಪಂಚನಾಮೆಯಲ್ಲಿ ರಸ್ತೆಯನ್ನು ತೋರಿಸಿದ್ದೇನೆ. ನಕ್ಷೆಯಲ್ಲಿ ತೋರಿಸಿದಂತೆ ದಾರಿಯನ್ನು ನಿಪಿ-2 ರ ಚಕಬಂದಿಯಲ್ಲಿ ತೋರಿಸಿಲ್ಲ ಎಂದರೆ ಸರಿ ಅಲ್ಲ.

ದಿಃ 18-12-2019 ರಂದು ನನ್ನ ಮುಂದೆ ಯಾವುದೇ ದೂರು ಬಂದಿರಲಿಲ್ಲ. ಚಾಸಾ-1 ರವರು ಬಳ್ಳಾರಿಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಪಡೆದಿಲ್ಲ. ಚಾಸಾ-1 ರವರನ್ನು ವಿಚಾರಿಸಲಾಗಿ ದಾಖಲೆ ಲಭ್ಯ ಇಲ್ಲ ಎಂದು ಹೇಳಿದ್ದರಿಂದ ಪಡೆದಿಲ್ಲ. ದೂರಿನಲ್ಲಿ ಸಂಧಾನ ಮಾಡಿಕೊಳ್ಳಲು ಪ್ರಯತ್ನಿಸಿದರೂ ಸಹ ಆಗದ ಕಾರಣ ದೂರು ನೀಡಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ಸಹ ಚಾಸಾ-1 ರವರು ನೀಡಿದ ದೂರಿಗೆ ಪೂರಕವಾಗಿ ಸುಳ್ಳು ದೋ.ಪ. ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ಕಚ್ಚಾ ನಕ್ಷೆಗೆ ಪಂಚರ ಸಹಿ ಪಡೆದಿಲ್ಲ. ಮಾನವಿ ಪಟ್ಟಣದ ಒಬ್ಬರ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

ಪುರಸಭೆ ಸಿಂಧನೂರಿಗೆ ಅರ್ಜಿ ನೀಡಿ ದಾಖಲೆ ಪಡೆದಿದ್ದೇನೆ. ನಿಪಿ-14 ಕ್ಕೆ ಮುಖ್ಯಾಧಿಕಾರಿಗಳ ಸೀಲ ಇಲ್ಲ ಎಂದರೆ, ಅವರ ಕಛೇರಿಯಿಂದಲೇ ಕಳುಹಿಸಿಕೊಟ್ಟಿದ್ದಾರೆ.

ಮದುವೆ ಕಾಲಕ್ಕೆ ಬೆಳ್ಳಿ ವಸ್ತುಗಳನ್ನು ನೀಡಿದ್ದರು ಎಂದು ಹೇಳಲಾದ ಆಭರಣ ರಶೀದಿಗಳು ಲಭ್ಯ ಇರದ ಕಾರಣ ಪಡೆದಿಲ್ಲ. ನಾನು ಯಾವುದೇ ಹೇಳಿಕೆಗಳನ್ನು ಪಡೆದಿಲ್ಲ ಮತ್ತು ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿ ಅಲ್ಲ. ಅದೇರೀತಿ ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ ಎಂದರೆ ಸರಿ ಅಲ್ಲ. ಸ್ಥಿತಿವಂತರಿರುವ ಚಾಸಾ-1 ರವರ ಮಾತುಕೇಳಿ ಸುಳ್ಳು ದೊ.ಪ. ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.